726

ಮೈಸೂರ ಗೆಜಿಟ್

ಸರ್ಕಾರದಿಂದ ಪ್ರಕಟಿಸಲ್ಪಟ್ಟದ್ದು.

ಬೆಂಗಳೂರು, ಶನಿವಾರ, ಆಗಸ್ಟ್ ತಾ॥ 24, ಸ॥ 1889.

☞ ಈ ಭಾಗವನ್ನು ಪ್ರತ್ಯೇಕ ಕೀಸು ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟ ನಂಬ್ರೆ ಕೊಡಲ್ಪಡುತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್ಗೀರು, ವಗೈರೇರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರು ಜೀಲ್ಲೆ ಕೋರ್ಟ್‌ನಲ್ಲಿ.

ತಾರೀಖು 29ನೇ ಜುಲೈ 1889ನೇ ಇಸವಿ.

ಇದರಿಂದ ತಿಳಿಯಪಡಿಸುವದೇನಂದರೆ,—ಜೀಲ್ಲಾ ಕೋರ್ಟ್‌ನಲ್ಲಿ ಫೈಸಲಾದ ವೊರಿಜಿನಲ್ ಮತ್ತು ಅಪ್ಪೀಲ್ ಮೊಕದ್ದಮೆಗಳಲ್ಲಿ ಅ ಬ್ಜಾಗಿ ಯಿರತಕ್ಕ ಬಿಡಿಬುಕ್ಕುಗಳು ಈ ಕೋರ್ಟು ರಿಕಾರ್ಡಿನಲ್ಲಿ ಜಮಾಯಿಸಿ ಯಿರುವದ್ದರಿಂದ ಅವುಗಳು ಸ॥ 1889ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 5ನೇ ಗುರುವಾರ ನಾಕಮಾಡಲ್ಪಡುವವು, ತಮಗೆ ಪ್ರಯೋಜನಕರವಾಗಿ ಯಿರತಕ್ಕ ಅಚ್ಚು ಮಾಡಿ ಇರು ವ ಯಾವ ಬುಕ್ಕನ್ನಾದರೂ ಜೋಪಾನಪಡಿಸಿಕೊಳ್ಳಬೇಕೆಂಬ ಯಿಷ್ಟವುಳ್ಳ ಜನರು ಮುಂದಿನ ತಿಂಗಳು 28ನೇ ತೇದಿಯಲ್ಲಿ ಅಫಸಾ ಆದ ಕ್ಕೆ ಮುಂಚಿತವಾಗಿ ರಿಕಾರ್ಡ್ ಕೀಪರಿಗೆ ಕೇಳಿಕೊಳ್ಳಬೇಕು.

ಅಪ್ಪಣೇ ಪ್ರಕಾರ,

ಎಸ್. ಆರ್. ಸುಬ್ಬರಾಯ ಆಯ್ಯರ್,
ರಿಜಿಸ್ಟ್ರಾರ್.

ಫೈನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ, ಪರಾ ಬರೆಯಲ್ಪಡಬಹುದಾದಂಥಾ ಸದರೀ ನೂಲದ ಡಿಬೆಂಚರ್‌ಗಳ ವೇಲೆ ಲಂಡನ್‌ನಲ್ಲಿ, ಸ್ಟ್ರಾಂಡ್ ಬೀದಿ 59ನೇ ನಂಬರ್ ಕಟ್ಟಣದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಟ್ಸ್ ಅಂಡ್‌ಕೋಯವರು ಬಡ್ಡೀಯನ್ನು ಪಾವತೀ ಮಾಡುವ ಬಗ್ಗೆ ಅವ ರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತೆಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೇನ್‌ಮೆಂಟ್ ಯಾನೇ ಪರಾ ಬಗ್ಗೆ ಇದರಡಿ ರುಜು ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ವೇಲೆ, ಪ್ಯೂಪ್ಪಕೇಟೂದ ಡಿವಾಂಡ್ ವಾರಂಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೇನ್‌ಮೆಂಟ್ ಬಗ್ಗೆ ಫೀ ಯೇನೂ ವಾರ್ಜ್ ವಸೂಲ್ಪಡಲಾರದು.

ಹೆಚ್. ಹಡ್ಸನ್,
ಕಾಂಪ್ಟ್ರೋಲರ್.